## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಶ್ರೀ ಎಂ.ಎಸ್.ನಿವರಗಿ, ಶ್ರೀ ಕೆ.ಸಿ.ನಂದಿಕೋಲ ಮತ್ತು ಶ್ರೀ ಕೆ.ನಟರಾಜ, ನಿವೃತ್ತ ಪ್ರಥಮ ದರ್ಜೆ ಸಹಾಯಕ ಇವರುಗಳಿಗೆ ಕೆ.ಸಿ.ಎಸ್.ಆರ್.ನಿಯಮ 247(ಎ)ರಂತೆ ಸೌಲಭ್ಯವನ್ನು ಮಂಜೂರು ಮಾಡುವ ಬಗ್ಗೆ – ಆದೇಶ

ಓದಲಾಗಿದೆ :-1. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ: ಮುಇಂ / ಪಂರಾಇಂಇ / ಬೆಂ / ಸಿ–9 / 14 / ನಿವೃತ್ತಿ / ಆದಾಸೇವೆ / 2017–18/ 4680, ದಿನಾಂಕ : 25.10.2017

2. ಸರ್ಕಾರದ ಆದೇಶ ಸಂಖ್ಯೆ: ಆಇ 4 ಎಸ್ಆರ್ಎ 2016, ದಿ: 10.04.2016 ಮತ್ತು ಆಇ 9 ಎಸ್ಆರ್ಎ 2012, ದಿ: 08.09.2016

*****

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ: 25.10.2017ರ ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರ ಪತ್ರದಲ್ಲಿ ಶ್ರೀ ಎಂ.ಎಸ್.ನಿವರಗಿ, ಶ್ರೀ ಕೆ.ಸಿ.ನಂದಿಕೋಲ ಮತ್ತು ಶ್ರೀ ಕೆ.ನಟರಾಜ, ನಿವೃತ್ತ ಪ್ರಥಮ ದರ್ಜೆ ಸಹಾಯಕ ಇವರುಗಳಿಗೆ ಕರ್ನಾಟಕ ನಾಗರಿಕ ಸೇವಾ ನಿಯಮಗಳು ನಿಯಮ 247(ಎ)ರ ಪ್ರಕಾರ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ಪಿಂಚಣಿ ಉದ್ದೇಶಕ್ಕೆ ಸೇರ್ಪಡೆ ಮಾಡಲು ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ: 10.04.2016 ಮತ್ತು 08.09.2016ರ ಆರ್ಥಿಕ ಇಲಾಖೆಯ ಆದೇಶಗಳಲ್ಲಿ ಪ್ರಾರಂಭದಲ್ಲಿ ದಿನಗೂಲಿ ಅಥವಾ ಮಿತವೇತನ ಪದವೀಧರರಾಗಿ ನೇಮಕಾತಿ ಹೊಂದಿ, ತದನಂತರ ಕ್ರಮಬದ್ಧಗೊಳಿಸಲಾದ ಸರ್ಕಾರಿ ನೌಕರರ ಪ್ರಕರಣಗಳಲ್ಲಿ ಅವರ ನಿವೃತ್ತಿ ಸಮಯದಲ್ಲಿ ಜಾರಿಯಲ್ಲಿದ್ದ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 247(ಎ)ರಲ್ಲಿನ ಅವಕಾಶಗಳನ್ವಯ ಸಂಬಂಧಪಟ್ಟ ಎಲ್ಲಾ ಅಗತ್ಯ ಮಾಹಿತಿ/ ದಾಖಲೆಗಳನ್ನು ಪರಿಶೀಲಿಸಿ, ಅರ್ಹ ಪ್ರಕರಣಗಳಲ್ಲಿ ಹೆಚ್ಚುವರಿ ಸೇವೆಯ ಸೇರ್ಪಡೆ ಅಧಿಕಾರವನ್ನು ಆಯಾ ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ ರವರಿಗೆ ಪ್ರತ್ಯಾಯೋಜಿಸಲಾಗಿದೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿ ಮತ್ತು ದಾಖಲೆಗಳನ್ನು ಪರಿಶೀಲಿಸಿದೆ. ಶ್ರೀ ಎಂ.ಎಸ್.ನಿವರಗಿ, ಶ್ರೀ ಕೆ.ಸಿ.ನಂದಿಕೋಲ ಮತ್ತು ಶ್ರೀ ಕೆ.ನಟರಾಜ, ನಿವೃತ್ತ ಪ್ರಥಮ ದರ್ಜೆ ಸಹಾಯಕ ಈ ಮೂರು ಜನರು ಪ್ರಾರಂಭದಲ್ಲಿ ದಿನಗೂಲಿ ನೌಕರರುಗಳಾಗಿ ನೇಮಕ ಹೊಂದಿ ತದನಂತರ ಸರ್ಕಾರಿ

-2

ಸೇವೆಯಲ್ಲಿ ಸಕ್ರಮಗೊಂಡು ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುತ್ತಾರೆ, ಸದರಿ ಮಾಹಿತಿಯನ್ನು ಕೆಳಕಂಡ ಕೋಷ್ಟಕದಲ್ಲಿ ವಿವರಿಸಲಾಗಿದೆ :-

| ಕ್ರ. ಸಂ. | ಹೆಸರು ಮತ್ತು ಹುಟ್ಟಿದ ದಿನಾಂಕ | ಸೇವಾ ಸಕ್ರಮಗೊಂಡ ದಿನಾಂಕ | ಸೇವೆಯಲ್ಲಿ ಸಕ್ರಮಗೊಂಡಾಗ ನೌಕರರ ವಯಸ್ಸು | ಸೇವೆಯಿಂದ ವಯೋನಿವೃತ್ತಿ ಹೊಂದಿದ ದಿನಾಂಕ | ನಿವೃತ್ತಿ ಹೊಂದುವ ದಿನಾಂಕಕ್ಕೆ ಸಲ್ಲಿಸಿರುವ ಒಟ್ಟು ಸೇವೆ |
|---|---|---|---|---|---|
| 1 | ಶ್ರೀ ಎಂ.ಎಸ್.ನಿವರಗಿ, 06.04.1954 | 01.08.1991 | 37 | 30.04.2014 | 22 ವರ್ಷ 09 ತಿಂಗಳು |
| 2 | ಶ್ರೀ ಕೆ.ಸಿ.ನಂದಿಕೋಲ, 01.06.1954 | 08.03.1991 | 36 | 31.05.2014 | 23 ವರ್ಷ 02 ತಿಂಗಳು 17 ದಿನಗಳು |
| 3 | ಶ್ರೀ ಕೆ.ನಟರಾಜ, 01.07.1951 | 01.01.1990 | 38 | 30.06.2011 | 21 ವರ್ಷ 06 ತಿಂಗಳು |

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247-ಎ ರನ್ವಯ ಪಿಂಚಣಿ ಉದ್ದೇಶಕ್ಕೆ ಅಧಿಕ ಸೇವೆಯ ಸೌಲಭ್ಯವನ್ನು ನೀಡುವ ಬಗ್ಗೆ ಗರಿಷ್ಟ ಅವಧಿಯ ವಿವರ ಕೆಳಕಂಡಂತಿದೆ :-

| ಕ್ರ.ಸಂ. | ನಿವೃತ್ತಿ ಹೊಂದಿರುವ ಅವಧಿ | ನಿಯಮ-247ಎ ರನ್ವಯ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ಸೇರಿಸಲು ಅವಕಾಶವಿರುವ ಗರಿಷ್ಠ ಅವಧಿ |
|---|---|---|
| 1 | ದಿ. 01.01.1971 ರಿಂದ 03.11.2004ರ ವರೆಗೆ | ಗರಿಷ್ಠ 8 ವರ್ಷಗಳು |
| 2 | ದಿ. 04.11.2004 ರಿಂದ 15.02.2012ರ ವರೆಗೆ | ಗರಿಷ್ಠ 4 ವರ್ಷಗಳು |
| 3 | ದಿ. 15.02.2012ರ ನಂತರ ನಿವೃತ್ತಿ ಹೊಂದಿರುವ / ಹೊಂದುವ ಪ್ರಕರಣಗಳಿಗೆ | ಗರಿಷ್ಠ 2 ವರ್ಷಗಳು |

ಸರ್ಕಾರವು ಈ ಪ್ರಕರಣದಲ್ಲಿ ಪ್ರಾರಂಭದಲ್ಲಿ ದಿನಗೂಲಿ ನೌಕರರಾಗಿ ನೇಮಕ ಹೊಂದಿ ತದನಂತರ ಸರ್ಕಾರಿ ಸೇವೆಯಲ್ಲಿ ಸಕ್ರಮಗೊಂಡು ಸೇವೆ ಸಲ್ಲಿಸಿ ದಿನಾಂಕ : 15.02.2012ರ ನಂತರ ನಿವೃತ್ತಿ ಹೊಂದಿದ ಶ್ರೀ ಎಂ.ಎಸ್.ನಿವರಗಿ ಮತ್ತು ಶ್ರೀ ಕೆ.ಸಿ.ನಂದಿಕೋಲ, ನಿವೃತ್ತ ಪ್ರಥಮ ದರ್ಜೆ ಸಹಾಯಕ ಇವರುಗಳಿಗೆ **2 ವರ್ಷಗಳ** ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ಹಾಗೂ ದಿನಾಂಕ : 04.11.2004ರ ರಿಂದ 15.02.2012ರ ಅವಧಿಯೊಳಗೆ ನಿವೃತ್ತಿ ಹೊಂದಿದ ಶ್ರೀ ಕೆ.ನಟರಾಜ, ನಿವೃತ್ತ ಪ್ರಥಮ ದರ್ಜೆ ಸಹಾಯಕ ರವರಿಗೆ 4 **ವರ್ಷಗಳ** ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ಪಿಂಚಣಿ / ನಿವೃತ್ತಿ ಸೌಲಭ್ಯಗಳ ಉದ್ದೇಶಕ್ಕೆ ಮಂಜೂರು ಮಾಡಲು ತೀರ್ಮಾನಿಸಿದೆ. ಆದುದರಿಂದ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 445 ಜಿಪಅ 2017, ದಿನಾಂಕ: 13.12.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರವು ಕರ್ನಾಟಕ ನಾಗರಿಕ ಸೇವಾ ನಿಯಮಗಳು ನಿಯಮ 247(ಎ)ರ ಪ್ರಕಾರ ಈ ಕೆಳಕಂಡ ನಿವೃತ್ತ ಪ್ರಥಮ ದರ್ಜೆ ಸಹಾಯಕರುಗಳಿಗೆ

ಅವರುಗಳ ಹೆಸರಿನ ಮುಂದೆ ತೋರಿಸಲಾಗಿರುವಷ್ಟು ವರ್ಷಗಳ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ಪಿಂಚಣಿ ಉದ್ದೇಶಕ್ಕೆ ಸೇರ್ಪಡೆ ಮಾಡಲು ಮಂಜೂರಾತಿ ನೀಡಿದೆ :-

| ಕ್ರ.ಸಂ. | ನಿವೃತ್ತ ನೌಕರರ ಹೆಸರು | ನಿಯಮ-247ಎ ರನ್ವಯ ಸೇರ್ಪಡೆ ಮಾಡಿರುವ ಹೆಚ್ಚುವರಿ ಅರ್ಹತಾದಾಯಕ ಸೇವಾವಧಿ |
|---|---|---|
| 1 | ಶ್ರೀ ಎಂ.ಎಸ್.ನಿವರಗಿ | **2 ವರ್ಷಗಳು** |
| 2 | ಶ್ರೀ ಕೆ.ಸಿ.ನಂದಿಕೋಲ | **2 ವರ್ಷಗಳು** |
| 3 | ಶ್ರೀ ಕೆ.ನಟರಾಜ | **4 ವರ್ಷಗಳು** |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

13/12/2017

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಇವರಿಗೆ:-**

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು. **(ಮೂಲ ಸೇವಾ ಪುಸ್ತಕದೊಂದಿಗೆ – ನೊಂದಣಿ ಅಂಚೆ ಮೂಲಕ/ಸ್ವೀಕೃತಿ ಬಾಕಿ).**
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ವಿಜಯಪುರ ಮತ್ತು ರಾಯಚೂರು.
4. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ಬಸವನಬಾಗೇವಾಡಿ ಮತ್ತು ದೇವದುರ್ಗ
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕ್ ಪಂಚಾಯತ್, ಮುಧೋಳ್
6. ಸಂಬಂಧಿಸಿದ ನೌಕರರಿಗೆ

**ಪ್ರತಿಯನ್ನು:-**

1. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಸೇವೆಗಳು-1)
2. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಜಂಟಿ ಕಾರ್ಯದರ್ಶಿ (ಆಡಳಿತ) / ಉಪ ಕಾರ್ಯದರ್ಶಿ (ಆಡಳಿತ) ಇವರುಗಳ ಆಪ್ತ ಕಾರ್ಯದರ್ಶಿ/ ಆಪ್ತ ಸಹಾಯಕರಿಗೆ
3. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ
4. ರಕ್ಷಾ ಕಡತ/ ಸೂಚನಾ ಫಲಕ/ ಹೆಚ್ಚುವರಿ ಪ್ರತಿಗಳು.

--